426

ಶುದ್ಧಾ ಶುದ್ಧ ಪತ್ರಿಕೆ.

ತಾರೀಖು 17ನೇ ಮೇ 1890.

1888ನೇ ಇಸವಿ ಜೂನ್ ತಾರೀಖು 30ನೇ ನಂಬರು 26ನೇ ಮೈಸೂರು ಗೆಜೆಟ್ 2ನೇ ಭಾಗ ಪುಟ 233ನೇ ಫಾರೆಸ್ಟ್ ಇಲಾಖೆ ನೋಟಿಫಿಕೇಷನ್‌ನಲ್ಲಿ ಕಂಕರ ಸ್ಟೇಟ್ ಫಾರೆಸ್ಟಿನ ಉತ್ತರದ ಗಡಿಯಲ್ಲಿ 4—5ನೇ ಪಂಗತಿಗಳಲ್ಲಿ ಇರುವ ಚಿಟ್ಟೆಷಾಳಗ್ರಾಮದ 61ನೇ ಸರ್ವೆ ನಂಬರು ಬಂದು ಸಂಣ ತುಂಡನ್ನು ಕರ್ಕೆ ಜೆನ್ನಹಳ್ಳಿ ಗ್ರಾಮದ 50ನೇ ಸರ್ವೆ ನಂಬರಿನಲ್ಲಿ ಇರುವ ನರಸೀಪುರ ಕೆರೆಗೆ ಬಂದು ಕೂಡುತ್ತದೆ ಯಂಬುವದಕ್ಕೆ ಬದಲಾಗಿ ಚಿಟ್ಟೆಷಾಳ ಸರ್ವೆ ನಂಬರು 61 ಮಂಜೆ) ಕೊಪ್ಪದ ಸರ್ವೆ ನಂಬರು 26 ಮತ್ತು ಇಟ್ಟುಗೆಹಳ್ಳಿ ಸರ್ವೆ ನಂಬರು 42 ಈ ಗಡಿಗಳ 3 ಬಾಂದುಗಳಿಗೆ ಹೋಗಿ ಇಟ್ಟುಗೆಹಳ್ಳಿ 42ನೇ ಸರ್ವೆ ನಂಬರು ದಾಟಿ ಜೆನ್ನಹಳ್ಳಿ ಇಟ್ಟುಗೆಹಳ್ಳಿ ಗಡಿಯಾ ಬಾಂದಿನಿಂದ ಸುಮಾರು 1 ಫರ್ಲಾಂಗ್ ದೂರದಲ್ಲಿ ಕೂಡುತ್ತದೆ ಯೆಂದು ಪೋದಿಕೊಳ್ಳತಕ್ಕದ್ದು. ಪೂರ್ವದ ಗಡಿಯಲ್ಲಿ ಮೇಲೆ ಕಂಡ ನರಸೀಪುರದ ಕೆರೆಯಿಂದ ಯಂಬುವದಕ್ಕೆ. ಬದಲಾಗಿ ಮೇಲೆ ಕಂಡ ಇಟ್ಟುಗೆಹಳ್ಳಿ ಗ್ರಾಮದ ಸರ್ವೆ ನಂಬರು 42ರಲ್ಲಿ ಉತ್ತರದ ಗಡಿ ಆಖೈರಾದ ಸ್ಥಳದಿಂದ ಯಂದು ಪೋದಿಕೊಳ್ಳತಕ್ಕದ್ದು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಷಹರ್ ಮಜಕೂರ್ ಕೋಟೇಲಿ ಇರುವ ಈ ಕೆಳಗೆ ತಪಶೀಲ್ ಮಾಡಿ ಯಿರುವ ಕಟ್ಟಡಗಳು 1890ನೇ ಇಸವಿ ಜುಲೈ 7ನೇ ತಾರೀಖು ಸೋಮವಾರ ದಿನ ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರವರ ಸಮಕ್ಷಮ ಆ ಸ್ಥಳದಲ್ಲಿ ಹರಾಜು ಮಾಡಲ್ಪಡುತ್ತೆ. ಹರಾಜ್ ಸದರೀ ತಾರೀಖು ದಿವಿ 12 ಘಂಟೆಗೆ ಶುರು ಮಾಡಿ ಹರಾಜಿನಲ್ಲಿ ಜಡ ದರಖಾಸ್ತು ಮಾಡಿದವರಿಗೆ ಬಿಡಲ್ಪಡುತ್ತೆ.

2. ಹರಾಜಿನಲ್ಲಿ ಪಡದವನು ಕೂಡ್ಲೆ ಜಡದರಖಾಸ್ತು ಮೊಬಲಗ್ ಪೈಕಿ ಕೇಕಡಾ 25ರ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಬಾಕಿ ಮೊಬಲಗು ಪಾವತಿ ಮಾಡಬೇಕು, ತಪ್ಪಿದಲ್ಲಿ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ತೆಗದುಕೊಳ್ಳಲ್ಪಡುವದು.

3. ವಾಯಿದೆ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡದೇಲೂ ಬಾಕಿ ಮೊಬಲಗು ಪಾವತಿ ಮಾಡದೇಲೂ ತಪ್ಪಿದರೆ ಈ ಕಟ್ಟಡಗಳು ಪುನಹ ಹರಾಜು ಮಾಡಲ್ಪಡುವವು. ಹೀಗೆ ಮಾಡುವದರಿಂದ ಮುಂಟಾಗುವ ಲುಕ್ಸಾನಿಗೆ ಅವ್ವಲ್ ದರಖಾಸ್ತುದಾರನು ಗುರಿಯಾಗುವನು.

4. ಹರಾಜಿನಲ್ಲಿ ದರಖಾಸ್ತು ಮಾಡುವವರು ಅವರ ಸ್ವಂತಕ್ಕಾಗಿ ಸವಾಲು ಮಾಡುವ ಬಗ್ಯೂ ಅಥವಾ ಇತರರಿಗೋಸ್ಕರ ಸವಾಲ್ ಮಾಡುವ ಬಗ್ಯೂ ಸ್ಪಷ್ಟವಾಗಿ ಲಿಖಿತಮೂಲಕ ತಿಳಿಸಬೇಕು. ಹೀಗೆ ಮಾಡದೆ ಯಿದ್ದರೆ ಅಂಥಾವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಹೀಗೆ ಮಾಡುವ ಹರಾಜು ದಿವಾ ಸಾಹೆಬರವರಿಂದ ಕಾಯಂ ಆಗುವ ವರಿಗೆ ಖೈದ್ ಆಗತಕ್ಕದ್ದಲ್ಲ. ದಿವಾ ಸಾಹೆಬರವರು ಹರಾಜಿನಲ್ಲಿ ಮಾಡುವ ಸವಾಲ್ ಯಾವಾಗಲಾಗಲಿ ಯಾವ ಕಾರಣವನ್ನೂ ನಮೂದಿಸದೇ ಅಂಗೀಕರಿಸುವದಕ್ಕೂ ತಿರಸ್ಕರಿಸುವದಕ್ಕೂ ಸ್ವತಂತ್ರ ವುಳ್ಳವರಾಗಿ ಯಿರುತ್ತಾರೆ.

6. ಹರಾಜಿನಲ್ಲಿ ಪಡದವರು ಪೂರಾ ಮೊಬಲಗು ಪಾವತಿ ಮಾಡಿ ದಿವಾ ಸಾಹೆಬರವರಿಂದ ಹರಾಜು ಕಾಯಂ ಆದನಂತರ ಸ್ವತ್ತುಗಳು ಅವರ ಸುಪರ್ದು ಮಾಡಲ್ಪಡುತ್ತೆ ಕಿವಾಯಿ ಹರಾಜು ಸರಟಿಫಿಕೇಟ್ ಸ್ಟೈ ಮೊಹರಿನಿಂದ ಕೊಡಲ್ಪಡುತ್ತೆ.

7. ಈ ಕಟ್ಟಡಗಳ ಪ್ಲಾನ್ ಸಿಟಿ ಮ್ಯುನಿಸಿಪಲ್ ಆಫೀನಲ್ಲಿ ಯಿರುತ್ತೆ. ಜನಗಳು ಬಂದು ನೋಡಬಹುದು.

ಕಟ್ಟಡಗಳ ತಪಸೀಲ್.

ಬಾರ್‌ಕೋಸ್ ಕಟ್ಟಡಾ ಆಥವಾ ಗ್ಯಾರಿಸ್ಟ್ ಆಸ್ಪತ್ರೆ ಇದರಲ್ಲಿ ಪೂರ್ವ ಮತ್ತು ಪಶ್ಚಿಮಭಾಗದಲ್ಲಿ ಕಂಪೌಂಡು ಗೋಡೆಗೆ ಕೇರಿದ ಜರ್ವಿ ಯಿದರ ಮಧ್ಯೆ ಬೈಲು ಸಹ.

ಕೆಳಭಾಗದ ತೋಪು ಖಾನೆ ಅಥವಾ ದಂಡಿನ ಸಾರ್ವಜನಿಕ ಯಿಡತಕ್ಕ ಗಡಂಗು ಯಿದರ ಮಧ್ಯೆ ಮೂರು ಪಾರ್ಶ್ವದಲ್ಲಿಯೂ ಬೈಲು ಯಿದೆರಲ್ಲಿ ಹಳೇ ಬಾದೂದುಖಾನೆ ಕೇರಿಕೊಂಡಿರುತ್ತೆ.

ಜಕ್ಕು ಬಂದಿ

ಉತ್ತರಕ್ಕೆ—ಸಂಣ ಬಂಗಲೆ.
ದಕ್ಷಿಣಕ್ಕೆ—ಅಪ್ಪಾನವು ಮೊದಲ್ಯಾರ್ರ ಬಂಗಲೆ.
ಪೂರ್ವಕ್ಕೆ—ಉತ್ತರದಿಂದ ದಕ್ಷಿಣಕ್ಕೆ ಹೋಗುವ ಕೋಟೇ ರಸ್ತೆ.
ಪಶ್ಚಿಮಕ್ಕೆ—ಕೋಟೇ ಗೋಡೆ ರಸ್ತೆ.

ಉತ್ತರಕ್ಕೆ—ಅಪ್ಪಾವು ಮೊದಲ್ಯಾರ್ರ ಬಂಗಲೆ ಯಿಂದ ಗುಡಿಗೆ ಹೋಗುವ ಸಂಣ ರಸ್ತೆ.
ದಕ್ಷಿಣಕ್ಕೆ—ಪೂರ್ವದಿಂದ ಪಶ್ಚಿಮಕ್ಕೆ ಹೋಗುವ ದೊಡ್ಡ ಹೊಸ ರಸ್ತೆ.
ಪೂರ್ವಕ್ಕೆ—ಉತ್ತರದಿಂದ ದಕ್ಷಿಣಕ್ಕೆ ಹೋಗುವ ದೊಡ್ಡ ರಸ್ತೆ.
ಪಶ್ಚಿಮಕ್ಕೆ—ಕೋಟೆಯಗೋಡೆ ಬಾಜೂ ರಸ್ತೆ.

ತಾರೀಖು 6ನೆ ಜೂನ್ 1890.

ಇದರಿಂದ ಯಲ್ಲರಿಗೂ ತಿಳಿಯಪಡಿಸುವದೇನಂದರೆ,—ಮಾಗಡಿ ತಾಲ್ಲೂಕು ಸಾವಂದುರ್ಗದ ಜಂಗಲ್‌ನಲ್ಲಿ ಬಹಳ ಬಿದುರುಗಳು ಅಂದರೆ ದೊಡ್ಡದು ಸಂಣದು ಸಹ ಕಡಿಯಲು ಲಾಯಖ್ಖಾಗಿ ಯಿರ್ತತ್ತವೆ. ಯಿವುಗಳನ್ನ 10—7—90ನೇ ತಾರೀಖು ದಿನ 11 ಘಂಟೆಗೆ ಮಾಗಡೀಲಿ ತಾಲ್ಲೂಕು ಅಮಲೆದಾರ್ರವರ ರೂಬರೂಲ್ ಹರುಜು ಮಾಡುತ್ತೆ.

ಹರಾಜು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

2. ಖಾಯಿಷ್ ವುಳ್ಳವರು ಫಾರೆಸ್ಟ್ ಇಲಾಖೆಯವರಿಂದ ಗೊತ್ತುಮಾಡಿಕೊಡುವ ಬ್ಲಾಕಿನಲ್ಲಿ ಬೊಂಬುಗಳನ್ನ ಕಡದು ಸಾಗಿಸಿ ಕೊಳ್ಳತಕ್ಕದ್ದಾಗಿರುತ್ತೆ.

3. ಆಕ್ಶೆರ್ ಸವಾಲ್ ಕೈದುಮಾಡಿದ ಕೂಡ್ಲೆ ಜಡ ಸವಾಲ್‌ದಾರನು ಹರಾಜು ಮೊಬಲಗಿನಲ್ಲಿ ಕೇಕಡಾ 25 ರೂಪಾಯಿ ಮೇರೆ ಡಿಪಾಜಿಟ್ ಯಿಡಬೇಕು. ಹರಾಜು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರು ಮಂಜೂರ್ಮಾಡಿದನಂತರ ಬಾಕಿ ಮೂರುಭಾಗದ ಮೊಬಲಗ್ ಕೊಟ್ಟು ಬಿಡಬೇಕು. ನಂತರ ಗೊತ್ತುಮಾಡಿ ಕೊಡುವ ಬ್ಲಾಕಿನಲ್ಲಿ ಬಿದರುಗಳನ್ನು ಕಡಿಯಲು ಅಪ್ಪಣೆ ಕೊಡಲಾಧೀತು, ಕಡಿಯುವಾಗ ಜಂಗಲ್‌ನಲ್ಲಿ ಇತರ ಮರ ಯಾ ಪೊರಗಳನ್ನು ಕಡಿಯಕೂಡದು, ಯಾ ಜಾಯಾ ಮಾಡಕೂಡದು, ಅಥವಾ ಮತ್ಯಾವ ಡಾಮೇಜನ್ನು ಮಾಡಕೂಡದು. ಇದಕ್ಕೆ ವಿರೋಧವಾಗಿ ನಡದರೆ ಫಾರೆಸ್ಟ್ ರೂಲ್ಸ್ ಮೇರೆ ಅವರು ಮಾಜಿಸ್ಟ್ರೇಟರಲ್ಲಿ ವಿಚಾರಣೆಗೆ ವಳಪಡುವರು.

4. ಅವಶ್ಯಕವಾದಷ್ಟು ಬಿದರು ಕಡಿಯೋಣ ಪೂರೈಸಿದ ಕೂಡ್ಲೆ ಫಾರೆಸ್ಟ್ ಇಲಾಖೇಯವರು ಯಿಣಿಕೆ ಮಾಡಿದ ನಂತರ ಹರಾಜುದಾರನು ಯುಕ್ತಾನುಸಾರ ಕೊಡುವ ವಾಯಿದೆಯಲ್ಲಿ ಭಂಡಿಗಳ್ಳಲ್ಲಿ ಸಾಗಿಸಿಕೊಳ್ಳಲು ಪದ್ಧತಿ ಮೇರೆ ಲೈಸೆನ್ಸ್ ಕೊಡಲಾಧೀತು.

5. ಬಾಕಿ ಅಂದರೆ ಹರಾಜುಮೊಬಲಗು ಬೈಕಿ ಮೂರು ಭಾಗದ ಹಣ ಕೊಡಲು ತಪ್ಪಿದರೆ ಡಿಪಾಜಿಟ್ ಬಗೆ ಮೊಬಲಗು ಸರ್ಕಾರಕ್ಕೆ ಕೇರಿಸಿಕೊಳ್ಳಲಾಧೀತು, ಅಲ್ಲದೆ ಹರಾಜುದಾರ್ರಿಗೆ ಕೊಟ್ಟಿರಬಹುದಾದ ಬ್ಲಾಕನ್ನು ಪುನಃ ಹರಾಜು ಮಾಡಿಸುತ್ತೆ. ಇದಕ್ಕಾಗಿ ತಗಲುವ ಖರ್ಚು ಮತ್ತು ಲುಕಸಾನಿಗೂ ಮೊದಲಿನ ಹರಾಜುದಾರನೇ ಗುರಿಯಾಗಿ ಯಿರತಕ್ಕದ್ದು.

ಪಿ. ಆರ್. ಕೃಷ್ಣಮೂರ್ತಿ,
ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿನಾಳೆಯಾದ ಡಿಕ್ರೀ ದೇಣೀದಾರ ಜಂಗಳೂರು ಪಿರ್ಕಿಕಬ್ಬೇಲಿ ಯಿರತಕ್ಕ ಗಿರಿಯಪ್ಪನ ವಿಷಯದಲ್ಲಿ—

ಸನ್ 1890ನೇ ಇಸವಿ ದಿವಾಣಿ ಕೇಸ್ ನಂಬರು 2.

ಹುಕುಂ

ಮೇಲ್ಕಂಡ ಗಿರಿಯಪ್ಪನು, ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿರಾದ ಮೆಸ್ಟರ್ ಯಲ್. ಅನಂತಸ್ವಾಮಿರ್ಯಂಗರವರ ರೂಬರೂ ಅರ್ಜೀದಾರನಾದ ಗಿರಿಯಪ್ಪನ ಪರವಾಗಿ ಅಡ್ವೊಕೇಟ್ ಮೆಸ್ಟರ್ ಯಸ್. ನರಸಿಂಹ್ಯಯ್ಯಂಗಾರ್ಯನ್ನು ಮತ್ತು ಸದ್ಗೀರುವನ ಬೇಣೀವರ್ಕಾದ 1—2 ಮತ್ತು 7ನೇ ಪ್ರತಿವಾದಿಗಳನ್ನು ಖುದ್ದಾಗಿ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೀದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ —2—4—5—6—8—9 ಇವರುಗಳು ಹಾಜರಾಗಲಿಲ್ಲಾ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಗಿರಿಯಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರಿ ಮೂಲಕ ದಿವಾಳಿಯಾಡವನೆಂದು ನಿರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿನೋಜನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೊಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿರಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಮೇ 23ನೇ ತಾರೀಖಿನಲ್ಲಿ ಈ ಕೋರ್ಟುನೊಹರಿ ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

2 ಪ